ದಿನಾಂಕಃ **17.08.2026** ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ಎನ್.ಜೆ. ವಕೀಲರಿಂದಃ

ನಾನು 10 ನೇ ತರಗತಿವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ದಾವಾ ಸ್ವತ್ತು ಮೂಲತಃ ಗಿರೇತಿಮ್ಮಯ್ಯ ಮತ್ತು ತಿಮ್ಮಕ್ಕರವರಿಗೆ ಸೇರಿತ್ತು. ನಾನು ತಿಮ್ಮಕ್ಕರವರ ಹೆಸರಿನಲ್ಲಿ ಇರುವಂತಹ ಪಹಣಿಯನ್ನು ಹಾಜರುಪಡಿಸಿರುತ್ತೇನೆ. ಸರ್ವೆ ನಂಬರ್. 2/4 ದಾವಾ ಸ್ವತ್ತಿನ ಉತ್ತರ ದಿಕ್ಕಿನಲ್ಲಿ ಇರುತ್ತದೆ. ವಾದಿ 4 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ವಾದಿ ದಾವಾ ಸ್ವತ್ತನ್ನು ಗೌರಮ್ಮ ಮತ್ತು ಅವರ ಮಗನಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಆದರೆ ದಿನಾಂಕ ಗೊತ್ತಿರುವುದಿಲ್ಲ. ಸದರಿ ಗೌರಮ್ಮ ಮತ್ತು ಅವರ ಮಗ ದಾವಾ ಸ್ವತ್ತನ್ನು ಹನುಮಯ್ಯರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಹನುಮಯ್ಯರವರ ಹೆಸರಿನಲ್ಲಿಯೂ ಸಹ 4 ಗುಂಟೆ ಜಮೀನಿನ ಖಾತೆ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ.

2. ವಾದಿ ದಾವಾ ಸ್ವತ್ತನ್ನು ಖರೀದಿ ಮಾಡಿದ ದಿನದಿಂದ ಖಾತೆ ವರ್ಗಾವಣೆ ಮಾಡಿಸಿಕೊಂಡು ಸ್ವಾಧೀನದಲ್ಲಿ ಇರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ವಾದಿ ಖರೀದಿ ಮಾಡಿದ ಜಮೀನಿನಲ್ಲಿ ನಾವು ತಿಪ್ಪೆ ಹಾಕಿರುತ್ತೇವೆ. ದಾವಾ ಸ್ವತ್ತಿನಲ್ಲಿ ಹುಲ್ಲಿನ ಬಣವೆ ಮತ್ತು ತಿಪ್ಪೆ ಹಾಕಿಕೊಂಡು ವಾದಿ ಸ್ವಾಧೀನದಲ್ಲಿ ಇರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತನ್ನು ವಾದಿ ಅಳತೆ ಮಾಡಿಸಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಯಾರು ಇಲ್ಲದಾಗ ಕಲ್ಲು ಹಾಕಿರುತ್ತಾರೆ ಆದರೆ ನಾವು ಅಳತೆ ತಡೆದಿರುತ್ತೇವೆ ಎಂದು ಉತ್ತರಿಸುತ್ತಾರೆ. ನನ್ನ ಸ್ವಾಧೀನದಲ್ಲಿ ಇರುವ ಸ್ವತ್ತಿಗೆ ಪೂರ್ವಕ್ಕೆ ನಮ್ಮದೆ ಜಮೀನು, ಪಶ್ಚಿಮಕ್ಕೆ ಹನುಮಯ್ಯ ಮತ್ತು ಸಣ್ಣಮ್ಮರವರ ಮನೆ, ಉತ್ತರಕ್ಕೆ ನಮ್ಮದೇ ಜಮೀನು, ದಕ್ಷಿಣಕ್ಕೆ ರಸ್ತೆ ಇರುತ್ತದೆ. ವಾದಿಗೆ ವಾದ ಪತ್ರದಲ್ಲಿ ನಮೂದು ಮಾಡಿರುವ ದಾವಾ ಸ್ವತ್ತಿನ ಚೆಕ್ಕುಬಂದಿಯನ್ನು

ಓದಿ ಹೇಳಿ ಸದರಿ ಚೆಕ್ಕುಬಂದಿಯ ಮಧ್ಯೆ ಇರುವ ಜಮೀನನ್ನು ವಾದಿ ಖರೀದಿ ಮಾಡಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಸದರಿ ಚೆಕ್ಕುಬಂದಿ ಸರಿ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ಈ ಮೇಲೆ ಹೇಳಿದ ಚೆಕುಬಂದಿಯ ಮಧ್ಯೆ ಇರುವ ಜಮೀನಿನಲ್ಲಿ ವಾದಿ ಸ್ವಾಧೀನದಲ್ಲಿ ಇರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

3. ನಮ್ಮ ಜಮೀನಿನ ಸರ್ವೆ ನಂಬರ್. 2/4. ದಾವಾ ಸ್ವತ್ತು ನನ್ನ ಸ್ವಾಧೀನದಲ್ಲಿ ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಸರ್ವೆ ನಂಬರ್. 2/3 ಕೇವಲ 2 ಗುಂಟೆ ಮಾತ್ರ ಇರುತ್ತದೆ ಎಂದು ನಾನು ಪ್ರಾಥಮಿಕ ದಾಖಲೆಗಳ ಮೇಲೆ ಹೇಳುತ್ತಿದ್ದೇನೆ. ಸರ್ವೆ ನಂಬರ್. 2/3 ರ ಒಟ್ಟು ವಿಸ್ತೀರ್ಣ 4 ಗುಂಟೆ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಅಥವಾ ಸ್ವಾಧೀನ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನನ್ನ ತಂದೆ ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ ಸಲ್ಲಿಸಿದ್ದಂತಹ ಮೇಲ್ಮನವಿಯ ಬಗ್ಗೆ ನನಗೆ ಗೊತ್ತಿರುವುದಿಲ್ಲ.

4. ದಾವಾ ಸ್ವತ್ತನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ